# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1227 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ ಎಸ್ ನವೀನ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 19.12.2024 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಬಕಾರಿ ಇಲಾಖೆಯಲ್ಲಿ ಕಳೆದ ಒಂದು ವರ್ಷದಲ್ಲಿ ಎಷ್ಟು ವರ್ಗಾವಣೆಯಾಗಿದೆ: (ವೃಂದವಾರು ವಿವರ ಒದಗಿಸುವುದು) | ಅಬಕಾರಿ ಇಲಾಖೆಯಲ್ಲಿ ಡಿಸೆಂಬರ್-2023 ರಿಂದ ನವೆಂಬರ್-2024ರವರೆಗೆ ವೃಂದವಾರು ವರ್ಗಾವಣೆಗೊಳಿಸಲಾದ ವಿವರ ಕೆಳಕಂಡಂತಿದೆ. |

| ಕ್ರ ಸಂ | ಪದನಾಮ | ವರ್ಗಾವಣೆ ಗೊಂಡಿರುವ ಸಂಖ್ಯೆ |
|---|---|---|
| ಗ್ರೂಪ್-ಎ | | |
| 01 | ಅಬಕಾರಿ ಜಂಟಿ ಆಯುಕ್ತರು | 04 |
| 02 | ಅಬಕಾರಿ ಉಪ ಆಯುಕ್ತರು | 27 |
| 03 | ಅಬಕಾರಿ ಅಧೀಕ್ಷಕರು | 30 |
| | ಒಟ್ಟು | **61** |
| ಗ್ರೂಪ್-ಬಿ | | |
| 04 | ಅಬಕಾರಿ ಉಪ ಅಧೀಕ್ಷಕರು | 35 |
| | ಒಟ್ಟು | **35** |
| ಗ್ರೂಪ್-ಸಿ | | |
| 05 | ಅಬಕಾರಿ ನಿರೀಕ್ಷಕರು | 155 |
| 06 | ಅಬಕಾರಿ ಉಪ ನಿರೀಕ್ಷಕರು | 21 |
| 07 | ಕಛೇರಿ ಅಧೀಕ್ಷಕರು | 00 |
| 08 | ಪ್ರಥಮ ದರ್ಜೆ ಸಹಾಯಕರು | 16 |
| 09 | ದ್ವಿತೀಯ ದರ್ಜೆ ಸಹಾಯಕರು | 02 |
| 10 | ಶೀಘ್ರಲಿಪಿಗಾರರು | 02 |
| 11 | ಅಬಕಾರಿ ಪೇದೆ | 31 |
| 12 | ಹಿರಿಯ ವಾಹನ ಚಾಲಕರು | 04 |
| 13 | ವಾಹನ ಚಾಲಕರು | 09 |
| | ಒಟ್ಟು | **240** |
| | ಒಟ್ಟಾರೆ | **336** |

| | | |
|---|---|---|
| ಆ) | ವರ್ಗಾವಣೆಯಲ್ಲಿ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದರೆ, ಭ್ರಷ್ಟಾಚಾರ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು: | ಅಬಕಾರಿ ಇಲಾಖೆಯ ವರ್ಗಾವಣೆಯಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿರುವುದಿಲ್ಲ. |
| ಇ) | ಕಳೆದ 1 ವರ್ಷದಲ್ಲಿ ನೀಡಲಾಗಿರುವ ಸಿಎಲ್-7 ಪರವಾನಿಗೆಯ ಸಂಖ್ಯೆ ಎಷ್ಟು;(ಜಿಲ್ಲಾವಾರು ವಿವರ ಒದಗಿಸುವುದು) | ಕಳೆದ ಒಂದು ವರ್ಷದಲ್ಲಿ (2023-24 ಮತ್ತು 2024-25 ನೇ ಸಾಲಿನ ನವೆಂಬರ್-2024 ರವರೆಗೆ) 573 ಸಿಎಲ್-7 ಸನ್ನದುಗಳನ್ನು ಮಂಜೂರು ಮಾಡಿದ್ದು, ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಈ) | ಅಬಕಾರಿ ಇಲಾಖೆಯಲ್ಲಿ ಅಬಕಾರಿ ಸುಂಕವನ್ನು ಎಷ್ಟು ಬಾರಿ ಹೆಚ್ಚಿಸಲಾಗಿದೆ; ಇದರಿಂದ ಸರ್ಕಾರಕ್ಕೆ ಬಂದಿರುವ ರಾಜಸ್ವ ಎಷ್ಟು? (ವಿವರ ಒದಗಿಸುವುದು) | 2023-24ನೇ ಸಾಲಿನಿಂದ ಇಲ್ಲಿಯವರೆಗೂ ಮದ್ಯದ ಮೇಲೆ ಯಾವುದೇ ಅಬಕಾರಿ ಸುಂಕವನ್ನು (Excise Duty) ಹೆಚ್ಚಳ ಮಾಡಿರುವುದಿಲ್ಲ.<br>2023-24ನೇ ಸಾಲಿನಲ್ಲಿ ಎರಡು ಬಾರಿ ಮದ್ಯದ ಮೇಲೆ ಹೆಚ್ಚುವರಿ ಅಬಕಾರಿ ಸುಂಕವನ್ನು (Additional Excise Duty) ಮಾತ್ರ ಹೆಚ್ಚಳ ಮಾಡಲಾಗಿದೆ<br>2024-25ನೇ ಸಾಲಿನಲ್ಲಿ AED ದರಗಳನ್ನು ಕಡಿಮೆ ಮಾಡಿ ತರ್ಕಬದ್ಧಗೊಳಿಸಲಾಗಿದೆ ಹಾಗೂ ಮದ್ಯದ ಬೆಲೆಯು (ಎಂ.ಆರ್.ಪಿ) ನಿಖರವಾಗಿ ಮುಂದಿನ ರೂ.5/-ಕ್ಕೆ ಪೂರ್ಣಗೊಳಿಸಿ (ಗುಣಕವಾಗಿಸಿ) ಹೆಚ್ಚುವರಿ ರೌಂಡಿಂಗ್-ಆಫ್ ಅಬಕಾರಿ ಸುಂಕ (Additional Rounding-0ff Excise Duty (AROED)) ವನ್ನು ವಿಧಿಸಲಾಗಿದೆ.<br>2023-24ನೇ ಸಾಲು<br>1) ಅಧಿಸೂಚನೆ ಸಂಖ್ಯೆ: FD 04 PES 2023 ದಿನಾಂಕ:18-07-2023 ರಂತೆ, ದಿನಾಂಕ:20-07-2023 ರಿಂದ ಅನ್ವಯವಾಗುವಂತೆ ಐ.ಎಂ.ಎಲ್ ಮದ್ಯದ ಎಲ್ಲಾ 18 ಸ್ಲಾಬ್‌ಗಳ ಮೇಲೆ ಶೇ.20 ರಷ್ಟು ಹೆಚ್ಚುವರಿ ಅಬಕಾರಿ ಸುಂಕವನ್ನು (Additional Excise Duty) ಹೆಚ್ಚಳ ಮಾಡಲಾಗಿರುತ್ತದೆ. ಇದರಿಂದ 2023-24ನೇ ಸಾಲಿಗೆ ರೂ. 2762 ಕೋಟಿಗಳಷ್ಟು ಹೆಚ್ಚುವರಿ ಅಬಕಾರಿ ರಾಜಸ್ವ ಸಂಗ್ರಹವಾಗಿರುತ್ತದೆ ಹಾಗೂ ಬಿಯರ್‌ನ ಘೋಷಿತ ಬೆಲೆಯ (Declared Price) ಮೇಲೆ ಹೆಚ್ಚುವರಿ ಅಬಕಾರಿ ಸುಂಕವನ್ನು ಶೇ. 175 ರಿಂದ ಶೇ. 185ಕ್ಕೆ ಹೆಚ್ಚಳ ಮಾಡಲಾಗಿರುತ್ತದೆ. ಇದರಿಂದ 2023-24ನೇ ಸಾಲಿಗೆ ರೂ. 142 ಕೋಟಿಗಳಷ್ಟು ಹೆಚ್ಚುವರಿ ಅಬಕಾರಿ ರಾಜಸ್ವ ಸಂಗ್ರಹವಾಗಿರುತ್ತದೆ. |

2) ಅಧಿಸೂಚನೆ ಸಂಖ್ಯೆ:FD 07 PES 2023 ದಿನಾಂಕ:31-01-2024 ರಂತೆ, ದಿನಾಂಕ:01-02-2024 ರಿಂದ ಅನ್ವಯವಾಗುವಂತೆ ಬಿಯರ್ ನ ಘೋಷಿತ ಬೆಲೆಯ (Declared Price) ಮೇಲೆ ಹೆಚ್ಚುವರಿ ಅಬಕಾರಿ ಸುಂಕವನ್ನು ಶೇ.185 ರಿಂದ ಶೇ.195 ಕ್ಕೆ ಹೆಚ್ಚಳ ಮಾಡಲಾಗಿರುತ್ತದೆ. ಇದರಿಂದ 2023-24ನೇ ಸಾಲಿಗೆ ರೂ. 70 ಕೋಟಿಗಳಷ್ಟು ಹೆಚ್ಚುವರಿ ಅಬಕಾರಿ ರಾಜಸ್ವ ಸಂಗ್ರಹವಾಗಿರುತ್ತದೆ.

ಒಟ್ಟಾರೆ 2023-24ನೇ ಸಾಲಿನಲ್ಲಿ ಎರಡು ಬಾರಿ ಮದ್ಯದ ಮೇಲೆ ಹೆಚ್ಚುವರಿ ಅಬಕಾರಿ ಸುಂಕವನ್ನು (Additional Excise Duty) ಹೆಚ್ಚಳ ಮಾಡಿರುವುದರಿಂದ ಒಟ್ಟು ರೂ.2974 ಕೋಟಿಗಳಷ್ಟು ಹೆಚ್ಚುವರಿ ಅಬಕಾರಿ ರಾಜಸ್ವ ಸಂಗ್ರಹವಾಗಿರುತ್ತದೆ.

2024-25ನೇ ಸಾಲು

1) ಅಧಿಸೂಚನೆ ಸಂಖ್ಯೆ: FD 03 PES 2024 ದಿನಾಂಕ: 23-08-2024 ರಂತೆ, ದಿನಾಂಕ:27-08-2024 ರಿಂದ ಅನ್ವಯವಾಗುವಂತೆ ಎಲ್ಲಾ 18 ಸ್ಲ್ಯಾಬ್‌ಗಳನ್ನು ತರ್ಕಬದ್ಧಗೊಳಿಸಿ 16 ಸ್ಲ್ಯಾಬ್‌ಗಳಿಗೆ ಇಳಿಸಿ, ಮೊದಲ 3 ಸ್ಲ್ಯಾಬ್ ಗಳಿಗೆ AED ದರಗಳನ್ನು ಬದಲಾವಣೆ ಮಾಡದೇ ಉಳಿದ 13 ಸ್ಲ್ಯಾಬ್ ಗಳಿಗೆ AED ದರಗಳನ್ನು ಕಡಿಮೆ ಮಾಡಿ ತರ್ಕಬದ್ಧಗೊಳಿಸಲಾಗಿದೆ.
2) ಅಧಿಸೂಚನೆ ಸಂಖ್ಯೆ: FD 04 PES 2024 ದಿನಾಂಕ:23-08-2024 ರಂತೆ, ದಿನಾಂಕ:27-08-2024 ರಿಂದ ಅನ್ವಯವಾಗುವಂತೆ, ಗರಿಷ್ಠ ಚಿಲ್ಲರೆ ಮಾರಾಟದ ಬೆಲೆಯನ್ನು ಲೆಕ್ಕಹಾಕಿದ ನಂತರ, ಮದ್ಯದ ಬೆಲೆಗಳು ಮುಂದಿನ ರೂ.5/- ಕ್ಕೆ ಪೂರ್ಣಗೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಅಂತಹ ದರದಲ್ಲಿ ಹೆಚ್ಚುವರಿ ರೌಂಡಿಂಗ್-ಆಫ್ ಅಬಕಾರಿ ಸುಂಕ (Additional Rounding-0ff Excise Duty (AROED)) ವಿಧಿಸಲಾಗುತ್ತದೆ. ಎಂ.ಆರ್.ಪಿ ಯ ಲೆಕ್ಕಾಚಾರದ ನಂತರ ಬಂದ ಎಂ.ಆರ್.ಪಿ (MRP) ಯು ನಿಖರವಾಗಿ ರೂ.5/-ರ ಗುಣಕವಾಗಿರುತ್ತದೆ. ಇದರಿಂದ ತಿಂಗಳಿಗೆ ಸುಮಾರು ರೂ. 27 ಕೋಟಿಗಳಷ್ಟು ಹೆಚ್ಚುವರಿ ಅಬಕಾರಿ ರಾಜಸ್ವ ಸಂಗ್ರಹವಾಗುತ್ತಿದ್ದು, ಉಳಿದ ಅವಧಿಗೆ ಅಂದರೆ ಸೆಪ್ಟಂಬರ್ 2024 ರಿಂದ ಮಾರ್ಚ್ 2025 ರವರೆಗೆ ಸುಮಾರು ರೂ. 190 ಕೋಟಿಗಳಷ್ಟು ಹೆಚ್ಚುವರಿ ಅಬಕಾರಿ ರಾಜಸ್ವ ಸಂಗ್ರಹವಾಗಬಹುದೆಂದು ನಿರೀಕ್ಷಿಸಲಾಗಿದೆ.

ಹೆಚ್ಚುವರಿ ಅಬಕಾರಿ ಸುಂಕದ (Additional Excise Duty) ದರಗಳನ್ನು ಕಡಿಮೆ ಮಾಡಿ 18 ಸ್ಲ್ಯಾಬ್‌ಗಳನ್ನು 16 ಸ್ಲ್ಯಾಬ್‌ಗಳಿಗೆ ಇಳಿಸಿ ತರ್ಕಬದ್ಧಗೊಳಿಸಿರುವುದರಿಂದ ಗ್ರಾಹಕರ ಉನ್ನತೀಕರಣ (premiumization) ವನ್ನು ಉತ್ತೇಜಿಸಲಾಗಿದ್ದು, semi premium ಮತ್ತು premium ಮದ್ಯದ ಸ್ಲಾಬ್‌ಗಳಲ್ಲಿ ಮದ್ಯದ ಮಾರಾಟದಲ್ಲಿ ಹೆಚ್ಚಳ ಉಂಟಾಗಿರುತ್ತದೆ.

| | | |
|---|---|---|
| | | 2023-24ನೇ ಆರ್ಥಿಕ ಸಾಲಿನ ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್ ಮಾಹೆಗಳಲ್ಲಿ semi premium ಮತ್ತು premium ಮದ್ಯದ ಸ್ಲಾಬ್‌ಗಳ ಮದ್ಯ ಮಾರಾಟದ ಪಾಲು ಶೇ.14.18 ರಷ್ಟಾಗಿದ್ದು, 2024-25ನೇ ಆರ್ಥಿಕ ಸಾಲಿನ ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್ ಮಾಹೆಗಳಲ್ಲಿ semi premium ಮತ್ತು premium ಮದ್ಯದ ಸ್ಲಾಬ್‌ಗಳ ಮದ್ಯ ಮಾರಾಟದ ಪಾಲು ಶೇ.21.03 ರಷ್ಟಾಗಿರುತ್ತದೆ. ಅಂದರೆ, semi premium ಮತ್ತು premium ಮದ್ಯದ ಬ್ರಾಂಡ್‌ಗಳ ಮಾರಾಟದಲ್ಲಿ ಶೇ. 6.85 ರಷ್ಟು ಹೆಚ್ಚಳವಾಗಿರುತ್ತದೆ. ಹಾಗಾಗಿ, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ semi premium ಮತ್ತು premium ಬ್ರಾಂಡ್‌ಗಳ ಬಳಕೆ ಹೆಚ್ಚಾಗುವ ಮೂಲಕ ಮಾರಾಟ ಹೆಚ್ಚಳದಿಂದ ರಾಜಸ್ವ ಸಂಗ್ರಹಣೆಯಲ್ಲಿ ಧನಾತ್ಮಕ ಬೆಳವಣಿಗೆ ಕಂಡು ಬರಬಹುದೆಂದು ಅಂದಾಜಿಸಲಾಗಿದೆ. |

ಆಇ 105 ಇಎಲ್‌ಕ್ಯೂ 2024

(ಆರ್.ಬಿ.ತಿಮ್ಮಾಪುರ)
ಅಬಕಾರಿ ಸಚಿವರು

| ಅನುಬಂಧ | | | | |
|---|---|---|---|---|
| ಕಳೆದ 01 ವರ್ಷದಲ್ಲಿ ಮಂಜೂರು ಮಾಡಿರುವ ಸಿಎಲ್-7 ಸನ್ನದುಗಳ ವಿವರ (ಅಬಕಾರಿ ವರ್ಷ ಜುಲೈನಿಂದ ಜೂನ್ ರವರೆಗೆ) | | | | |
| ಕ್ರ. ಸಂ. | ಜಿಲ್ಲೆ | 2023-24 | 2024-25 (ದಿ:01-07-24 ರಿಂದ ದಿ:30-11-24 ರವರೆಗೆ) | ಒಟ್ಟು |
| 1 | ಬೆಂಗಳೂರು ನಗರ ಜಿಲ್ಲೆ - 1 | 19 | 9 | 28 |
| 2 | ಬೆಂಗಳೂರು ನಗರ ಜಿಲ್ಲೆ - 2 | 28 | 14 | 42 |
| 3 | ಬೆಂಗಳೂರು ನಗರ ಜಿಲ್ಲೆ - 3 | 22 | 12 | 34 |
| 4 | ಬೆಂಗಳೂರು ನಗರ ಜಿಲ್ಲೆ - 4 | 3 | 0 | 3 |
| 5 | ಬೆಂಗಳೂರು ನಗರ ಜಿಲ್ಲೆ - 5 | 8 | 9 | 17 |
| 6 | ಬೆಂಗಳೂರು ನಗರ ಜಿಲ್ಲೆ - 6 | 8 | 1 | 9 |
| 7 | ಬೆಂಗಳೂರು ನಗರ ಜಿಲ್ಲೆ - 7 | 4 | 4 | 8 |
| 8 | ಬೆಂಗಳೂರು ನಗರ ಜಿಲ್ಲೆ - 8 | 25 | 9 | 34 |
| 9 | ಕೋಲಾರ | 21 | 15 | 36 |
| 10 | ಬೆಂಗಳೂರು ಗ್ರಾಮಾಂತರ | 35 | 18 | 53 |
| 11 | ಚಿಕ್ಕಬಳ್ಳಾಪುರ | 16 | 13 | 29 |
| 12 | ರಾಮನಗರ | 11 | 9 | 20 |
| 13 | ತುಮಕೂರು | 17 | 12 | 29 |
| 14 | ಬಾಗಲಕೋಟೆ | 4 | 4 | 8 |
| 15 | ಬೆಳಗಾವಿ ಉತ್ತರ | 5 | 0 | 5 |
| 16 | ಬೆಳಗಾವಿ ದಕ್ಷಿಣ | 4 | 1 | 5 |
| 17 | ವಿಜಯಪುರ | 6 | 1 | 7 |
| 18 | ಧಾರವಾಡ | 3 | 0 | 3 |
| 19 | ಚಿಕ್ಕಮಗಳೂರು | 6 | 5 | 11 |
| 20 | ದಾವಣಗೆರೆ | 2 | 1 | 3 |
| 21 | ಹಾವೇರಿ | 2 | 1 | 3 |
| 22 | ಶಿವಮೊಗ್ಗ | 10 | 3 | 13 |
| 23 | ಬಳ್ಳಾರಿ | 0 | 1 | 1 |
| 24 | ವಿಜಯನಗರ | 2 | 2 | 4 |
| 25 | ಚಿತ್ರದುರ್ಗ | 1 | 4 | 5 |
| 26 | ಗದಗ | 2 | 2 | 4 |
| 27 | ಕೊಪ್ಪಳ | 3 | 0 | 3 |
| 28 | ಬೀದರ್ | 4 | 2 | 6 |
| 29 | ಕಲಬುರಗಿ | 8 | 0 | 8 |
| 30 | ರಾಯಚೂರು | 7 | 1 | 8 |
| 31 | ಯಾದಗಿರಿ | 3 | 0 | 3 |
| 32 | ದಕ್ಷಿಣ ಕನ್ನಡ | 20 | 3 | 23 |
| 33 | ಕೊಡಗು | 4 | 3 | 7 |
| 34 | ಉಡುಪಿ | 4 | 5 | 9 |
| 35 | ಉತ್ತರ ಕನ್ನಡ | 2 | 1 | 3 |
| 36 | ಚಾಮರಾಜನಗರ | 5 | 1 | 6 |
| 37 | ಹಾಸನ | 16 | 12 | 28 |
| 38 | ಮಂಡ್ಯ | 15 | 3 | 18 |
| 39 | ಮೈಸೂರು ನಗರ | 6 | 2 | 8 |
| 40 | ಮೈಸೂರು ಗ್ರಾಮಾಂತರ | 20 | 9 | 29 |
| ರಾಜ್ಯದ ಒಟ್ಟು | | 381 | 192 | 573 |

ಆಇ 105 ಇಎಲ್‌ಕ್ಯೂ 2024